# ಸ್ವಾಮಿ ಅಶೇಷಾನಂದ (೧೮೯೯ - ೧೯೯೬)


ಮೂಲ ಬಂಗಾಳಿ: **ಸ್ವಾಮಿ ಚೇತನಾನಂದ** ಅನುವಾದ: **ಕುಮಾರಿ ಪಿ. ಉಷಾ**

ಭಾಗ ೧

**ಶಾ**ಸ್ತ್ರಗಳಲ್ಲಿ ಸಾಧುಗಳ ಲಕ್ಷಣಗಳನ್ನು ವಿವಿಧವಾಗಿ ವರ್ಣಿಸಲಾಗಿದೆ. ಕೃಷ್ಣನು ಉದ್ಧವನಿಗೆ ಸಾಧುಗಳ ಗುಣಗಳ ವರ್ಣನೆಯನ್ನು ಮಾಡುತ್ತ ಹೀಗೆ ಹೇಳುತ್ತಾನೆಂದು ಭಾಗವತದಲ್ಲಿದೆ *(೧೧.೧೧.೨೯-೩೦)*: 'ಸಾಧು ಕೃಪಾಳುವೂ, ಅಜಾತಶತ್ರುವೂ, ತಿತಿಕ್ಷೆಯುಳ್ಳವನೂ ಪರೋಪಕಾರಿಯೂ ಆಗಿರುವನು. ಅವನು ಮುಕ್ತಕಾಮನೂ, ಜಿತೇಂದ್ರಿಯನೂ, ಶಾಂತನೂ, ನಿರ್ಮಲನೂ, ಅಕಿಂಚನನೂ, ಅನಾಸಕ್ತನೂ ಆಹಾರದಲ್ಲಿ ಸಂಯಮಿಯೂ, ನಮ್ರನೂ ಸ್ಥಿರನೂ, ಭಗವಂತನಲ್ಲಿ ಶರಣಾದವನೂ ಆಗಿರುವನು. ಅವನು ಜಾಗ್ರತನೂ, ಗಭೀರನೂ ಧೃತಿವಂತನೂ, ಶಕ್ತಿವಂತನೂ, ವಿನಯವಂತನೂ, ಇತರರಲ್ಲಿ ಶ್ರದ್ಧೆಯುಳ್ಳವನೂ, ಕರ್ಮದಕ್ಷನೂ, ಸಕಲರಲ್ಲಿ ಸ್ನೇಹಪರನೂ, ಕರುಣಾಳುವೂ, ವಿದ್ವಾಂಸನೂ ಆಗಿರುವನು.' ಸ್ವಾಮಿ ಅಶೇಷಾನಂದರ ಜೀವನದಲ್ಲಿ ಈ ಗುಣಗಳೆಲ್ಲವೂ ಪ್ರಕಾಶಗೊಂಡಿದ್ದವು.

ಸ್ವಾಮಿ ಅಶೇಷಾನಂದರ ಪೂರ್ವಾಶ್ರಮದ ಹೆಸರು ಕಿರಣಚಂದ್ರ ಘೋಷಾಲ್. ೧೮೯೯ರ ೧೧ನೇ ಜುಲೈ ಬಾಂಗ್ಲಾದೇಶದ ಫರೀದ್‌ಪುರ್‌ನಲ್ಲಿ ಜನಿಸಿದ ಅವರು ಕಲ್ಕತ್ತದ ಸೇಂಟ್ ಪಾಲ್ಸ್ ಕಾಲೇಜಿನಲ್ಲಿ ದರ್ಶನ ಶಾಸ್ತ್ರವನ್ನು ವ್ಯಾಸಂಗ ಮಾಡಿದರು. ವಿದ್ಯಾರ್ಥಿಯಾಗಿದ್ದಾಗ ತಮ್ಮ ಸ್ನೇಹಿತರಾದ ಅಖಿಲಾನಂದ ಹಾಗೂ ವಿವಿದಿಶಾನಂದರೊಂದಿಗೆ ಅವರು ಸ್ವಾಮಿ ಬ್ರಹ್ಮಾನಂದರ ದರ್ಶನವನ್ನು ಪಡೆದರು. ೧೯೨೧ರಲ್ಲಿ ರಾಮಕೃಷ್ಣ ಸಂಘಕ್ಕೆ ಸೇರಿ ೧೯೨೧ರಲ್ಲಿ ಸ್ವಾಮಿ ಬ್ರಹ್ಮಾನಂದರಿಂದ ಬ್ರಹ್ಮಚರ್ಯ ದೀಕ್ಷೆಯನ್ನೂ, ೧೯೨೩ರಲ್ಲಿ ಸ್ವಾಮಿ ಶಾರದಾನಂದರಿಂದ ಸಂನ್ಯಾಸ ದೀಕ್ಷೆಯನ್ನೂ ಪಡೆದರು. ೧೯೨೧ರಿಂದ ೧೯೨೭ರ ತನಕ ಅವರು ಸ್ವಾಮಿ ಶಾರದಾನಂದರ ಸೆಕ್ರೆಟರಿಗಳಾಗಿ ಕೆಲಸ ಮಾಡಿದರು. ಶಾರದಾನಂದರ ದೇಹತ್ಯಾಗದ ಬಳಿಕ ಅವರು ಕಾಶಿಯ ಅದ್ವೈತ ಆಶ್ರಮ ಹಾಗೂ ಮದ್ರಾಸಿನ ವಿದ್ಯಾರ್ಥಿನಿಲಯದಲ್ಲಿ ಕಾರ್ಯನಿರತರಾಗಿದ್ದರು.

೧೯೪೭ರಲ್ಲಿ ಅವರು ಸ್ವಾಮಿ ನಿಖಿಲಾನಂದರ ಸಹಾಯಕರಾಗಿ ನ್ಯೂಯಾರ್ಕ್‌ಗೆ ಬಂದರು. ನಂತರ ಅವರು ಬಾಸ್ಟನ್ ಹಾಗೂ ಹಾಲಿವುಡ್‌ನಲ್ಲಿ ಕೆಲಸ ಮಾಡಿ, ಬಳಿಕ ೧೯೫೫ರಲ್ಲಿ ಪೋರ್ಟ್‌ಲ್ಯಾಂಡ್‌ನ ವೇದಾಂತ ಸೊಸೈಟಿಯ ಅಧ್ಯಕ್ಷರಾದರು. ಅಮೆರಿಕಾಗೆ ಬಂದ ಮೇಲೆ ಅವರೆಂದೂ ಭಾರತಕ್ಕೆ ಹೋಗಲಿಲ್ಲ. ಅನೇಕ ಬಾರಿ ನಾವು ಅವರಿಗೆ 'ಮಹಾರಾಜ್, ಒಮ್ಮೆಯಾದರೂ



ಮಾತೃಭೂಮಿಯ ದರ್ಶನ ಮಾಡಿ ಬನ್ನಿ; ಹೋಗಿ ಬರುವ ಖರ್ಚನ್ನು ನಾವು ಕೊಡುತ್ತೇವೆ' ಎಂದರೆ ಅವರು, 'ನೋಡಪ್ಪ, ಸ್ವಾಮೀಜಿಯವರು ತುರೀಯಾನಂದರಿಗೆ, ಭಾರತವನ್ನು ಮರೆತು ಜಗನ್ಮಾತೆಗಾಗಿ ಕೆಲಸ ಮಾಡು ಎಂದಿದ್ದರು' ಎಂದರು. ಸ್ವಾಮೀಜಿಯ ಈ ನುಡಿಗಳನ್ನು ಗಂಭೀರವಾಗಿ ಸ್ವೀಕರಿಸಿದ ಮಹಾರಾಜರು ತಮ್ಮ ಜೀವನವನ್ನೆಲ್ಲ ಅಮೆರಿಕದ ಜನರಿಗೆ ವೇದಾಂತ, ಶ್ರೀರಾಮಕೃಷ್ಣ, ಶ್ರೀಮಾತೆ ಹಾಗೂ ಸ್ವಾಮೀಜಿಯವರ ಉಪದೇಶಗಳನ್ನು ನೀಡುವುದರಲ್ಲಿ ಕಳೆದರು.

ಹೊರನೋಟ ಹಾಗೂ ಅವರ ವೇಷಭೂಷಣಗಳು ವಿಚಿತ್ರವಾಗಿದ್ದವು - ಹಳೆಯ ಕೆಲವೆಡೆ ಹರಿದುಹೋದ ಪೋಷಾಕು, ಕೆದರಿದ ಕೂದಲು, ಹೇಗೋ ಕತ್ತರಿಸಿದ ಗಡ್ಡ, ಕಿವಿ ಮುಚ್ಚುವ ಟೋಪಿ ಹಾಗೂ ಓವರ್‌ಕೋಟು! ಆದರೆ ಅವರ ಕಣ್ಣುಗಳು ಉಜ್ವಲವಾಗಿದ್ದವು. ಕಂಠಸ್ವರ ಗಂಭೀರವಾಗಿಯೂ, ಜೋರಾಗಿಯೂ ಇತ್ತು; ದೃಢತೆಯಿಂದ ವಿನೂತನವಾದ ಭಂಗಿಯಲ್ಲಿ ಮಾತನಾಡುತ್ತಿದ್ದರು. ಭಾಷಣವೊಂದರಲ್ಲಿ ಅವರು ಹೀಗೆ ಹೇಳಿದ್ದರು- ''ಪಾಶ್ಚಾತ್ಯ ವಿಜ್ಞಾನವು ಪರಮಾಣು ವಿದಳನದಿಂದ

ಪ್ರಪಂಚವನ್ನೇ ಧ್ವಂಸಗೊಳಿಸುವ ಸಾಮರ್ಥ್ಯವುಳ್ಳ ಶಕ್ತಿಯನ್ನು ಬಿಡುಗಡೆ ಮಾಡಿದ್ದರೆ, ಶ್ರೀರಾಮಕೃಷ್ಣರು ತಮ್ಮ ತೀವ್ರ ಸಾಧನೆಯಿಂದ ಮಾಯೆಯ ತೆರೆಯನ್ನು ಕತ್ತರಿಸಿ ಭಗವತ್ ಸಾಕ್ಷಾತ್ಕಾರವನ್ನು ಪಡೆಯುವ ಶಕ್ತಿಯನ್ನು ಬಿಡುಗಡೆ ಮಾಡಿರುವರು. 'ಶಕ್ತಿ' (Power) ಇರುವಲ್ಲಿ 'ಶಾಂತಿ' ಇಲ್ಲ. ಶಕ್ತಿಯನ್ನರಸಿದರೆ ನೀವು 'Rolls Royce' ಗಳಿಸುವಿರಿ; ಶಾಂತಿಯನ್ನರಸಿದರೆ ಭಗವಂತನನ್ನು ಪಡೆಯುವಿರಿ. 'ತ್ಯಾಗ' ಎಂದರೆ ಪ್ರಪಂಚದ ದೈವೀಕರಣವೇ ಹೊರತು ಅದರ ನಿಂದನೆಯಲ್ಲ.''

ಒಂದು ದಿನ ಬೆಳಿಗ್ಗೆ ಸಾಧುಗಳು ಮಹಾಪುರುಷ ಸ್ವಾಮಿ ಶಿವಾನಂದರಿಗೆ ಪ್ರಣಾಮ ಸಲ್ಲಿಸಲು ಹೋದರು. ಅವರ ಕೋಣೆಯ ಮೇಲಿದ್ದ ಹೂದಾನಿಯಲ್ಲಿ ಒಂದು ಹಳದಿ ಬಣ್ಣದ ಗುಲಾಬಿಯಿತ್ತು. ಮಹಾಪುರುಷಜೀ ಸಾಧುಗಳನ್ನುದ್ದೇಶಿಸಿ ಹೇಳಿದರು, ''ಈ ಹೂವನ್ನು ನೋಡಿರಿ. ಈ ಹೂವು ತನ್ನ ಸೌಂದರ್ಯ ಹಾಗೂ ಪರಿಮಳದಿಂದ ಈ ಕೋಣೆಯ ವಾತಾವರಣವನ್ನು ಆಹ್ಲಾದಕರವಾಗಿಸಿದೆ. ಅದೇ ರೀತಿ ಆಶ್ರಮದಲ್ಲಿ ಒಬ್ಬನೇ ಒಬ್ಬ ಉತ್ತಮ ಸಾಧುವು ಇಡೀ ಆಶ್ರಮದ ವಾತಾವರಣದಲ್ಲಿ ಆಧ್ಯಾತ್ಮಿಕತೆಯನ್ನು ತುಂಬುತ್ತ ಅನೇಕ ಜನರನ್ನು ಆಕರ್ಷಿಸುವನು.''

೧೯೭೩ರಲ್ಲಿ ನಾನು ಅವರನ್ನು ಮೊದಲ ಬಾರಿ ಕಂಡಾಗ ನನಗೆ ಹೀಗೆ ಅನಿಸಿತ್ತು – ಅವರ ದರ್ಶನ ಹಾಗೂ ಸಂಗಲಾಭಕ್ಕಾಗಿ ಅನೇಕ ಸಾಧು, ಸಂನ್ಯಾಸಿ ಹಾಗೂ ಭಕ್ತರು ಪೋರ್ಟ್‌ಲ್ಯಾಂಡ್ ಆಶ್ರಮಕ್ಕೆ ತ್ವರೆ ಮಾಡುತ್ತಿದ್ದರು. ಅವರು ನಿರ್ಮಲ-ಶುದ್ಧ ಚರಿತ್ರರೂ, ತ್ಯಾಗ-ವೈರಾಗ್ಯಮಂಡಿತರೂ ಭಕ್ತಿಪೂರ್ಣರೂ ಆಗಿದ್ದರು. ಅವರು ಸ್ವಾಧೀನ-ಚೇತನರೂ, ತೇಜಸ್ವಿಗಳೂ, ವಿದ್ವಾಂಸರೂ ಕೂಡ ಆಗಿದ್ದರು. ಅವರ ಹೃದಯ ಪ್ರೀತಿ-ಪ್ರೇಮಗಳಿಂದ ತುಂಬಿದ್ದರೂ, ಅವರು ಕಠೋರ-ಶಿಸ್ತಿನವರೂ ಆಗಿದ್ದರು. ಕಾಡು-ಹರಟೆ, ಪರನಿಂದೆ, ಪರಚರ್ಚೆಗಳನ್ನು ಅವರು ಸಹಿಸುತ್ತಿರಲಿಲ್ಲ. ಪೂಜೆ ಮಾಡುವುದೆಂದರೆ ಅವರಿಗೆ ಇಷ್ಟ. ಅವರ ಜೀವನದಲ್ಲಿ ನಾಲ್ಕು ಯೋಗಗಳ ಸಮನ್ವಯವನ್ನು ಕಾಣಬಹುದಿತ್ತು. ಇಷ್ಟೊಂದು ಗುಣ ಸಂಪನ್ನರಾಗಿದ್ದರೂ ಸಮಯ ಪ್ರಜ್ಞೆ ಅಷ್ಟಾಗಿ ಇರಲಿಲ್ಲ. ಆಶ್ರಮದಲ್ಲಿ ನಡೆಯುವ ಪೂಜೆ, ಉಪನ್ಯಾಸಗಳು ನಿರ್ದಿಷ್ಟವಾಗಿದ್ದರೂ ಅವುಗಳನ್ನು ಪ್ರಾರಂಭಿಸುವುದೇ ಸ್ವಲ್ಪ ತಡವಾಗಿಬಿಡುತ್ತಿತ್ತು. ಅಮೆರಿಕನ್ ಭಕ್ತರು ಇದಕ್ಕೆ ಹೊಂದುಕೊಂಡುಬಿಟ್ಟಿದ್ದರು. ಮಹಾರಾಜರು ಅವರಿಗೆ, 'ನೀವು ಸಮಯದಲ್ಲಿ ಜೀವಿಸುತ್ತೀರಿ. ನಾವು ಶಾಶ್ವತತೆಯಲ್ಲಿ ವಾಸಿಸುತ್ತೇವೆ' ಎಂದು ಹೇಳಿಕೊಡಲು ಇಚ್ಛಿಸಿದರೇನೋ. ಅವರು ಸ್ವಾವಲಂಬಿಗಳಾಗಿದ್ದರು. ತಮ್ಮ ಕೋಣೆ ಹಾಗೂ ಸ್ನಾನಗೃಹವನ್ನು ತಾವೇ ಸ್ವಚ್ಛಗೊಳಿಸುತ್ತಿದ್ದರು, ತಾವೇ ಅಡಿಗೆ ಮಾಡಿಕೊಂಡು ಊಟ ಮಾಡುತ್ತಿದ್ದರು. ವೃದ್ಧಾಪ್ಯದಲ್ಲೂ ಆಶ್ರಮದಲ್ಲಿ ಬೆಳೆದ ಹುಲ್ಲನ್ನು ಯಂತ್ರದಿಂದ ತಾವೇ ಕತ್ತರಿಸುತ್ತಿದ್ದರು.

ಸ್ವಾಮಿ ಅಶೇಷಾನಂದರನ್ನು ನೋಡಿದಾಗ ಅವರು ದೈವಾವೇಶದಿಂದ ನಡೆಯುತ್ತಿದ್ದಂತೆ ತೋರುತ್ತಿತ್ತು. ಅವರು ಸ್ವಾವಲಂಬಿಗಳೆಂದು ಅವರ ನಡೆ-ನುಡಿಗಳಿಂದಲೇ ತಿಳಿದುಕೊಳ್ಳಬಹುದಿತ್ತು. ಕೆಲವೊಮ್ಮೆ ಠಾಕೂರರ ಶಿಷ್ಯರು ಪರಸ್ಪರ ಮೋಜು, ತಮಾಷೆ ಮಾಡುವುದರ ಬಗ್ಗೆ ಹಾಸ್ಯಾಸ್ಪದ ಘಟನೆಗಳನ್ನು ಹೇಳುತ್ತಿದ್ದರು. ಅಂತಹ ಒಂದು ಘಟನೆಯನ್ನು ಅವರು ಪುನಃ ಪುನಃ ಹೇಳುತ್ತಿದ್ದರು. ಅವರದೇ ಮಾತುಗಳಲ್ಲಿ :

''ಪ್ರಾರಂಭದಲ್ಲಿ ಮಠಕ್ಕೆ ಸೇರಿ ಮೂರು-ನಾಲ್ಕು ವರ್ಷಗಳ ಬಳಿಕವೇ ಬ್ರಹ್ಮಚರ್ಯ ದೀಕ್ಷೆ ನೀಡಲಾಗುತ್ತಿತ್ತು. ನಾನು ಸೇರಿದ ಒಂದು ವರ್ಷದಲ್ಲಿ ಶರತ್ ಮಹಾರಾಜರು ನನ್ನನ್ನು 'ಉದ್ಬೋಧನ'ದಿಂದ ಬೇಲೂರು ಮಠಕ್ಕೆ ಬ್ರಹ್ಮಾನಂದರ ಬಳಿ ಬ್ರಹ್ಮಚರ್ಯಕ್ಕಾಗಿ ಕಳುಹಿಸಿದರು. ನಾನು ಮಹಾರಾಜರ ಬಳಿಸಾರಿ, 'ಮಹಾರಾಜ್, ನನ್ನನ್ನು ಆಶೀರ್ವದಿಸಿ, ನೀವು ದಯವಿಟ್ಟು ನನಗೆ ಠಾಕೂರರ ಜನ್ಮದಿನದಂದು (೧೯೨೨ ಇಸವಿ) ಬ್ರಹ್ಮಚರ್ಯ ದೀಕ್ಷೆಯನ್ನು ಕರುಣಿಸಿ'' ಎಂದು ಕೋರಿದೆ.

ಮಠದ ಕಟ್ಟಡದ ಮಹಡಿಯ ಪೂರ್ವದಿಕ್ಕಿನ ವರಾಂಡದಲ್ಲಿ ಆರಾಮಕುರ್ಚಿಯಲ್ಲಿ ಕುಳಿತಿದ್ದ ಮಹಾರಾಜರು ಸ್ವಲ್ಪ ಚಿಂತಿಸಿ, ''ನೋಡು, ನಾನು ನಿನಗೆ ಬ್ರಹ್ಮಚರ್ಯ ದೀಕ್ಷೆ ನೀಡಬಲ್ಲೆ. ಆದರೆ ಒಂದು ಶರತ್ತಿದೆ – ನೀನು ನನಗೆ ಮುಂಗಡವಾಗಿ ೧೦೮ ರೂ. ಗುರು ದಕ್ಷಿಣೆ ಕೊಡಬೇಕು ಇಲ್ಲವಾದರೆ ಬ್ರಹ್ಮಚರ್ಯ ದೀಕ್ಷೆ ಕೊಡಲಾರೆ'' ಎಂದರು.

ಏನೂ ತೋಚದೆ ನಾನೆಂದೆ, ''ಮಹಾರಾಜ್, ನನ್ನ ಬಳಿ ಹಣ ಇಲ್ಲ. ಅದಲ್ಲದೆ ಅಷ್ಟೊಂದು ಹಣ ದೊರೆಯುವುದಾದರೂ ಎಲ್ಲಿಂದ? ನಿಮ್ಮ ಕೃಪೆಯಿಲ್ಲದೆ ನನಗೆ ಬೇರೆ ಗತಿಯಿಲ್ಲ.''

ಮಹಾರಾಜರು ಗಂಭೀರವಾಗಿ ಹೇಳಿದರು, ''ನೋಡು, ನಿನಗೊಂದು ಉಪಾಯವನ್ನು ಹೇಳಿಕೊಡುತ್ತೇನೆ. ಶಾರದಾನಂದರ ಬಳಿ ತುಂಬ ಹಣವಿದೆ. 'ಉದ್ಬೋಧನ'ದ ಹಣವೆಲ್ಲ ಅವರದೆ. ನೀನು ಅವರ ಸೇವಕ. ಶಾರದಾನಂದರಿಂದ ನೀನು ಹಣವನ್ನು ಪಡೆ.''

ನಾನು ಮಾತಿಲ್ಲದೆ ಸುಮ್ಮನೆ ನಿಂತಿದ್ದೆ. ಮಹಾರಾಜರು ಗೋವಿಂದ ಎಂಬ ಬ್ರಹ್ಮಚಾರಿಗೆ ಹೇಳಿದರು, ''ಗೋವಿಂದ, ನೀನು ಮೇದಿನಿಪುರದಿಂದ ಬಂದಿರುವೆ. ನೀನು ಒಡಿಸ್ಸಿ ನೃತ್ಯವನ್ನು ಮಾಡಿ ತೋರಿಸಿದರೆ, ನಿನಗೆ ಬ್ರಹ್ಮಚರ್ಯ ದೀಕ್ಷೆಯನ್ನು ಕೊಡುವೆ.'' ಗೋವಿಂದನು ಯಾವ ಸಂಕೋಚವೂ ಇಲ್ಲದೆ, ಕೈ-ಕಾಲು ಅಲುಗಿಸಿ, ಸೊಂಟವನ್ನು ಬಳುಕಿಸಿ ಮಹಾರಾಜರೆದುರು ನರ್ತಿಸಿದ. ಮಹಾರಾಜರು ನಕ್ಕು ಸಂತೋಷದಿಂದ ಅವನಿಗೆ ಬ್ರಹ್ಮಚರ್ಯವನ್ನು ಮಂಜೂರು ಮಾಡಿದರು.

ನಾನು ಅಸಹಾಯಕನಾಗಿ ದೋಣಿಯಲ್ಲಿ 'ಉದ್ಬೋಧನ'ಕ್ಕೆ ಹಿಂದಿರುಗಿ, ಶರತ್ ಮಹಾರಾಜರಿಗೆ ನಡೆದುದನ್ನೆಲ್ಲ ತಿಳಿಸಿದೆ.

ಅವರು ಗಂಭೀರವಾಗಿ, ''ಒಳ್ಳೆಯದು, ನೀನು ಮಠಕ್ಕೆ ಹೋಗಿ, ನಾನು ಮಹಾರಾಜರ ದಾಸನೆಂದೂ 'ಉದ್ಬೋಧನ'ದ ಹಣವೆಲ್ಲ ಅವರದೇ, ಅವರಿಗೆಷ್ಟು ಬೇಕೋ ಅಷ್ಟು ಕೊಡುವುದಾಗಿ ಹೇಳು'' ಎಂದರು.

ನಾನು ಮತ್ತೆ ಮಠಕ್ಕೆ ಹೋಗಿ ಮಹಾರಾಜರಿಗೆ ಪ್ರಣಾಮ ಮಾಡಿ ಶರತ್ ಮಹಾರಾಜರು ಹೇಳಿದ್ದನ್ನು ಅವರಿಗೆ ನಿವೇದಿಸಿದೆ.

ಮಹಾರಾಜರು ತಲೆಯಾಡಿಸುತ್ತ ಗುಡುಗಿದರು, ''ಟೊಳ್ಳು ಮಾತು! ಟೊಳ್ಳು ಮಾತುಗಳನ್ನು ನಾನು ನಂಬುವುದಿಲ್ಲ! ಅವರು ತಮ್ಮ ಮಾತನ್ನು ಉಳಿಸಿಕೊಳ್ಳುವರೆಂದು ನಾನು ಹೇಗೆ ತಾನೆ ನಂಬಲಿ? ನೀನು ಅವರಿಂದ ಲಿಖಿತವಾಗಿ ಏನಾದರೂ ತಂದಿರುವೆಯಾ? ನೋಡು ನೀನು ಅವರ ಸೆಕ್ರೆಟರಿ. ನೀನು ಈ ಹಣವನ್ನು ಅಂಗೀಕರಿಸಿದ ಒಂದು ಡ್ರಾಫ್ಟ್ ದಸ್ತಾವೇಜು ಮಾಡಿ ಅವರಿಂದ ಸಹಿ ಮಾಡಿಸಿಕೊಂಡು ಬಂದರೆ ಒಪ್ಪುವೆ.''

ತಬ್ಬಿಬ್ಬಾಗಿ ನಾನು ಪುನಃ 'ಉದ್ಬೋಧನ'ಕ್ಕೆ ಮರಳಿದೆ. ಶರತ್ ಮಹಾರಾಜರು ಆಗ ಧ್ಯಾನ ಮಾಡುತ್ತಿದ್ದರು. ಧ್ಯಾನ ಮುಗಿದಾಗ ನಾನವರಿಗೆ ಎಲ್ಲವನ್ನೂ ಹೇಳಿದೆ. ಅವರೆಂದರು, ''ಸರಿ ನಾಳೆ, ನಿನ್ನೊಂದಿಗೆ ನಾನು ಬೇಲೂರು ಮಠಕ್ಕೆ ಹೋಗುವೆ.''

ಮರುದಿನ ಶರತ್ ಮಹಾರಾಜರೊಂದಿಗೆ ನಾನು ಬೇಲೂರು ಮಠಕ್ಕೆ ಹೋದೆ. ಮಹಾರಾಜರ ಕೋಣೆಯೊಳಗೆ ಹೋಗುವ ಮುನ್ನ ಅವರು ನನಗೆ ಹೊರಗೆ ಕಾಯಲು ಹೇಳಿದರು. ಸ್ವಲ್ಪ ಹೊತ್ತಿನ ಬಳಿಕ ಅವರು ಹೊರಬಂದು, ''ನೀನು ಇತರರೊಂದಿಗೆ ಬ್ರಹ್ಮಚರ್ಯ ದೀಕ್ಷೆಯನ್ನು ಪಡೆಯುವೆ'' ಎಂದು ಹೇಳಿದರು. ಅವರಿಬ್ಬರ ನಡುವೆ ನಡೆದ ಮಾತುಕತೆ ಇಂದಿಗೂ ನನಗೆ ಅಜ್ಞಾತವಾಗಿಯೇ ಉಳಿದಿದೆ.

ಅದಿರಲಿ, ೧೯೨೨ರಲ್ಲಿ ಠಾಕೂರರ ಜಯಂತಿಯಂದು ನನಗೆ ಬ್ರಹ್ಮಚರ್ಯ ದೀಕ್ಷೆ ನೀಡಲಾಯಿತು. ಮಹಾರಾಜರು ನೀಡಿದ ಕಡೆಯ ದೀಕ್ಷೆಯೆಂದರೆ ಇದೆ. ಸ್ವಾಮಿ ಶುದ್ಧಾನಂದರು ಆಚಾರ್ಯರಾಗಿದ್ದರು. ಹೋಮದ ಬಳಿಕ ಮಹಾರಾಜರು, ''ಠಾಕೂರರು ನಿಮಗೆ ಬ್ರಹ್ಮಚರ್ಯವನ್ನು ರಕ್ಷಿಸಿಕೊಳ್ಳುವ ಶಕ್ತಿ ನೀಡಲಿ. ನಿಮ್ಮ ಪವಿತ್ರತೆ ಉಜ್ವಲವಾಗಿರಲಿ. ಠಾಕೂರರು ತಮ್ಮ ಪಾದಪದ್ಮಗಳಲ್ಲಿ ನಿಮ್ಮ ಭಕ್ತಿ-ಪ್ರೇಮಗಳನ್ನು ಪೂರ್ಣಗೊಳಿಸಲಿ. ಅವರ ಅನಂತ ಕೃಪೆ ಸದಾ ನಿಮ್ಮ ಮೇಲೆ ವರ್ಷಿಸಲಿ'' ಎಂದು ಆಶೀರ್ವದಿಸಿದರು. ನನಗವರು 'ಬ್ರಹ್ಮಚಾರಿ ಕಲ್ಯಾಣಚೈತನ್ಯ' ಎಂದು ನಾಮಕರಣ ಮಾಡಿದರು.

೧೯೮೭ರಲ್ಲಿ ಅಶೇಷಾನಂದರು ಇಬ್ಬರು ಬ್ರಹ್ಮಚಾರಿಗಳಿಗೆ ದೀಕ್ಷೆ ನೀಡಲು ಬಾಸ್ಟನ್‌ಗೆ ಬಂದರು. ಸ್ವಾಮಿ ಸರ್ವಗತಾನಂದರು ಹಾಗೂ ನಾನು ಆಗ ಅಲ್ಲಿದ್ದೆವು. ಸ್ವಾಮಿ ಆದೀಶ್ವರಾನಂದರು ತಮ್ಮ ಭಾಷಣದಲ್ಲಿ ಮಾಡಿದ ವಿನೋದದಿಂದ ಮಹಾರಾಜರು ಹೇಳಲಾರದಷ್ಟು ಜೋರಾಗಿ ನಕ್ಕಾಗ ಅವರ ಭಕ್ತರೊಬ್ಬರು ಅವರ ಚಿತ್ರವನ್ನು ತೆಗೆದರು.

ಏಪ್ರಿಲ್ ೧೯೭೩ರಲ್ಲಿ ಠಾಕೂರರ ಜಯಂತಿಯ ಸಂದರ್ಭದಲ್ಲಿ ಭಾಷಣ ನೀಡಲು ಸ್ವಾಮಿ ವಿವಿದಿಶಾನಂದರು ನನ್ನನ್ನು ಆಮಂತ್ರಿಸಿದರು. ನಾನಾಗ ಹಾಲಿವುಡ್ ಆಶ್ರಮದ ಸದಸ್ಯ. ಸಿಯಾಟೆಲ್‌ನಿಂದ ಹಿಂದಿರುಗುವ ಪಥದಲ್ಲಿ ನಾನು ಪೋರ್ಟ್‌ಲ್ಯಾಂಡ್‌ಗೆ ಹೋದೆ. ತಮ್ಮ ಜೊತೆಯಲ್ಲಿ ಮಿಸ್ಟರ್ ಬುಷ್ (ಆಶ್ರಮದ ಪ್ರೆಸಿಡೆಂಟ್) ಅವರನ್ನು ಏರ್‌ಪೋರ್ಟ್‌ಗೆ ಕರೆದುಕೊಂಡು ಬಂದಿದ್ದರು. ಶ್ರೀಮಾತೆಯವರ ಶಿಷ್ಯರಾದ ಒಬ್ಬ ಹಿರಿಯ ಸಾಧುಗಳು ನನ್ನನ್ನು ಸ್ವಾಗತಿಸಲು ಬಂದಿರುವುದನ್ನು ಕಂಡು ಅವಾಕ್ಕಾದೆ. ಅವರು ನನಗೆ ಅಲ್ಲಿನ ದರ್ಶನೀಯ ಸ್ಥಳಗಳಾದ ಹುಡ್ ಪರ್ವತ, ಮಲ್ಟ್ನೋಮಾ ಜಲಪಾತ ತೋರಿಸಿಕೊಂಡು ಹಿಂದಿರುಗುವಾಗ ಕೊಲಂಬಿಯಾ ನದಿಯಲ್ಲಿ ನಿಂತು ಕೆಲವು ಸ್ತವಗಳನ್ನು ಪಠಿಸಿದಾಗ ವಿಶ್ವ ಪ್ರಕೃತಿಯ ನಡುವೆ ಪರಮಾತ್ಮನ ಪ್ರಕಾಶವನ್ನು ಅವರು ಕಾಣುತ್ತಿದ್ದಂತೆ ನನಗೆ ತೋರಿತು. ಮತ್ತೊಂದು ದಿನ ಅವರು ನನಗೆ Scappoose Vedanta Retreatಗೆ ಕರೆದುಕೊಂಡು ಹೋದರು. ಸಾಧನೆ-ಭಜನೆಗಳಿಗೆ ಅದು ಸೂಕ್ತವಾದ ಸುಂದರ ಸ್ಥಳ. ೧೨೦ ಎಕರೆಗಳ ಜಮೀನಿನ ದಟ್ಟವಾದ ವನದ ಮಧ್ಯದಲ್ಲಿ ದೇವಸ್ಥಾನ ಹಾಗೂ ನಿವಾಸ ಸ್ಥಳಗಳಿರುವ ಸುಂದರ ತಾಣ!

ಒಂದು ಮಧ್ಯಾಹ್ನ ಆಶ್ರಮವಾಸಿಗಳೊಂದಿಗೆ ಭೋಜನ ಮಾಡಲು ಕುಳಿತಿದ್ದೆ. ಮಹಾರಾಜರು ತಡವಾಗಿ ಊಟ ಮಾಡುತ್ತಿದ್ದರು. ಊಟದ ಮನೆಗೆ ಬಂದ ಅವರು, ''ಚೇತನಾನಂದ, ನಿನಗಾಗಿ ನಾನು ಪಾಯಸ ತಯಾರಿಸಿರುವೆ'' ಎಂದರು. ಪಾಯಸವು ಸ್ವಲ್ಪ ತಳ ಹಿಡಿದಿದ್ದು ಸ್ವಲ್ಪ ಸುಟ್ಟ ವಾಸನೆಯಿದ್ದರೂ, ಅವರು ಅದರ ಬಗ್ಗೆ ಕೇಳಿದಾಗ 'ಮಹಾರಾಜ್, ತುಂಬ ರುಚಿಯಾಗಿದೆ' ಎಂದೆ. ಅವರು ಸಂತೋಷಪಟ್ಟರು. ಅದರಿಂದ ಈ ವೃದ್ಧ ಸಾಧುಗಳ ಸೇವಾಭಾವ ಹಾಗೂ ಮಾತೃಹೃದಯದ ಪರಿಚಯ ನನಗಾಯಿತು. ಒಂದು ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಅವರು ನನ್ನನ್ನು ಸಮೀಪದ ಒಂದು ಕೆರೆಯ ಬಳಿ ಕರೆದುಕೊಂಡು ಹೋದರು. ಈ ಕೆರೆಯ ಸುತ್ತಲೂ ನಡೆದಾಡಲು ರಸ್ತೆಯಿದೆ. ಅವರು ನಿರ್ಜನ ಪ್ರದೇಶದಲ್ಲಿ ಏಕಾಂಗಿಯಾಗಿರಲು ಇಷ್ಟಪಡುತ್ತಿದ್ದರು. ಆಗ ಅವರು ನನಗೆ ಹಿಂದಿನ ದಿನಗಳ ಬಗ್ಗೆ ಹೇಳುತ್ತಿದ್ದರು. ಅವುಗಳನ್ನೆಲ್ಲ ಬರೆದಿಟ್ಟುಕೊಂಡಿದ್ದರೆ ಚೆನ್ನಾಗಿರುತ್ತಿತ್ತು. ಬಳಿಕ ಅವರು ನನಗೆ ೧೯೨೧ರಿಂದ ೧೯೨೭ರ ವರೆಗೆ ಶರತ್ ಮಹಾರಾಜರೊಂದಿಗೆ 'ಉದ್ಬೋಧನ'ದಲ್ಲಿ ಕಳೆದ ಸಮಯದ ಬಗ್ಗೆ ತಮ್ಮದೇ ಕೈಬರಹದ ೪೦೦ ಪುಟಗಳ ಒಂದು ಡೈರಿಯನ್ನು ಕೊಟ್ಟರು. ಈ ಡೈರಿಯಿಂದ ೩೧ ಪುಟಗಳನ್ನು ಕಾಪಿ ಮಾಡಿದೆ. ಅದನ್ನು ಈ ಸ್ಮೃತಿಕಥೆಯ ಕೊನೆಯಲ್ಲಿ ನೀಡಲಾಗಿದೆ.

*(ಮುಂದುವರಿಯುವುದು)*